# ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟ

ಫೋನ ನಂ . **(O):** 08354-201351/201285
**(F):** 08354-235152
**(M)** : 9480696389

ಆಡಳಿತಾಧಿಕಾರಿಗಳ ಕಛೇರಿ,
ಉದ್ಯಾನಗಿರಿ,
ಬಾಗಲಕೋಟ – 587 104
ರಾಜ್ಯ: ಕರ್ನಾಟಕ.

ಸಂ. ಆಕ/ಸಿಶಾ–1/ತೋವಿವಿಬಾ/ವರ್ಗಾವಣೆ ನಿಯಮಾವಳಿ/ /2015–16/6845 ದಿನಾಂಕ: 04.01.2016

## ಸುತ್ತೋಲೆ

**ವಿಷಯ :** ವರ್ಗಾವಣೆ ನಿಯಮಾವಳಿಗಳು.

ಉಲ್ಲೇಖ : 1) ಸುತ್ತೋಲೆ ಸಂ: ಆಕ / ಸಿಶಾ–1 / ತೋವಿವಿಬಾ/5381/2014–15 ದಿ: 03–11–2014.
2) ಸುತ್ತೋಲೆ ಸಂ: ಆಕ / ಸಿಶಾ–1 / ತೋವಿವಿಬಾ/7312/2014–15 ದಿ: 13–01–2015.
3) ದಿನಾಂಕ 21.11.2015 ರಂದು ಜರುಗಿದ 34ನೇ ವ್ಯವಸ್ಥಾಪನಾ ಮಂಡಳಿ ಸಭೆ ಘಟಕ ಸಂ.5 ರ ನಡುವಳಿಗಳು.
4) ಮಾನ್ಯ ಕುಲಪತಿಗಳ ಅನುಮೋದನೆ.

ಮೇಲ್ಕಾಣಿಸಿದ ವಿಷಯಕ್ಕೆ ಸಂಬಂಧಿಸಿದಂತೆ, ಉಲ್ಲೇಖಿತ (1 & 2)ರಲ್ಲಿನ ವರ್ಗಾವಣೆ ಮಾರ್ಗದರ್ಶಿಗಳನ್ನು ಪರಿಷ್ಕರಿಸಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ ಸಿಬ್ಬಂದಿಗಳು ವರ್ಗಾವಣೆ ಹೊಂದಲು ಈ ಕೆಳಗೆ ಕಾಣಿಸಿದ ವರ್ಗಾವಣೆ ನಿಯಮಾವಳಿಗಳನ್ನು ತಕ್ಷಣದಿಂದ ಜಾರಿಗೆ ಬರುವಂತೆ ಅಳವಡಿಸಿಕೊಳ್ಳುವುದು.

1. ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯ, ಬಾಗಲಕೋಟೆ ಅಡಿಯಲ್ಲಿ ಬರುವ ಎಲ್ಲಾ ಶಿಕ್ಷಕ ಹಾಗೂ ಶಿಕ್ಷಕೇತರ ಸಿಬ್ಬಂದಿಗಳು **ವರ್ಗಾವಣೆ ಪಡೆಯಲು ಕನಿಷ್ಠ ಮೂರು (3) ವರ್ಷಗಳ** ಸೇವಾ ಅವಧಿಯನ್ನು ಪೂರ್ಣಗೊಳಿಸಿರತಕ್ಕದ್ದು.
2. **ಅಂಗವಿಕಲ ನೌಕರರ** ವರ್ಗಾವಣೆಯನ್ನು ಸಹಾನುಭೂತಿಯಿಂದ ನೋಡಬೇಕೆಂದು ಅವರಿಗೆ ವರ್ಗಾವಣೆಯ ಸಾಮಾನ್ಯ ನಿಯಮಗಳಲ್ಲಿ ರಿಯಾಯಿತಿಯನ್ನು ನೀಡಲು ಸೂಚಿಸಲಾಗಿದೆ. ಆದ್ದರಿಂದ, ಅಂಗವಿಕಲ ನೌಕರರ ಕಾರ್ಯನಿಷ್ಠೆ ಬಗ್ಗೆ ಯಾವುದೇ ಆಕ್ಷೇಪಣೆಯಿಲ್ಲದಿದ್ದಲ್ಲಿ ಒಂದೇ ಸ್ಥಳದಲ್ಲಿ ನಿಗದಿತ ಅವಧಿಗಿಂತ ಹೆಚ್ಚು ಕಾಲ ಮುಂದುವರೆಸಬಹುದು. ಒಂದು ವೇಳೆ ಬಡ್ತಿಯ ಆಧಾರದ ಮೇಲೆ ವರ್ಗಾವಣೆ ಅತ್ಯವಶ್ಯಕವಾದಾಗ ಅವರ ಇಚ್ಛೆ ವಿರುದ್ಧ ವರ್ಗಾಯಿಸುವ ಪ್ರಕರಣಗಳು ಅತಿ ವಿರಳವಾಗಿರಬೇಕೆಂದು, ಅವರ ಇಚ್ಛೆಯನುಸಾರ ಖಾಲಿ ಹುದ್ದೆಗಳ ಲಭ್ಯತೆ ಮೇರೆಗೆ ಅವರು ನೀಡಿದ ಸ್ಥಳಕ್ಕೆ ವರ್ಗಾವಣೆ ಮಾಡತಕ್ಕದ್ದು.
3. ಖಾಯಂ ಪೂರ್ವ ಸೇವಾ ಅವಧಿಯು ಘೋಷಣೆಯಾಗಿರಬೇಕು.
4. **ಪರಸ್ಪರ ವರ್ಗಾವಣೆ** ಬಯಸುವ ಸಿಬ್ಬಂದಿಗಳು ಒಂದಕ್ಕಿಂತ ಹೆಚ್ಚು ಜನರೊಂದಿಗೆ ಪರಸ್ಪರ ವರ್ಗಾವಣೆಗೆ ಅರ್ಹರಲ್ಲ.
5. **ಪರಸ್ಪರ ವರ್ಗಾವಣೆ** ಬಯಸಿದಲ್ಲಿ ನೌಕರರು **ಮೂರು (3) ವರ್ಷಗಳ** ಸೇವಾವಧಿಯನ್ನು ಪೂರೈಸಿರತಕ್ಕದ್ದು.
6. ಅರ್ಜಿ ಸಲ್ಲಿಸಲು ನಿಗದಿಪಡಿಸಿರುವ ಕೊನೆಯ ದಿನಾಂಕಕ್ಕೆ ಕನಿಷ್ಠ **ಮೂರು (3) ವರ್ಷಗಳ** ಸೇವೆಯನ್ನು ಒಂದೇ ಸ್ಥಳದಲ್ಲಿ ಪೂರ್ಣಗೊಳಿಸಿರಬೇಕು ಮತ್ತು ನಿವೃತ್ತಿ ಹೊಂದಲು ಕನಿಷ್ಠ **ಎರಡು (2) ವರ್ಷಕ್ಕಿಂತ** ಹೆಚ್ಚಿನ ಸೇವೆ ಹೊಂದಿರಬೇಕು.
7. **ಪರಸ್ಪರ ವರ್ಗಾವಣೆ** ಸೇವಾವಧಿಯಲ್ಲಿ ಒಂದಕ್ಕಿಂತ ಹೆಚ್ಚುಬಾರಿ ಪರಿಗಣಿಸಲು ಅವಕಾಶವಿರುವುದಿಲ್ಲ.
8. **ಅತ್ಯಂತ ತೀವ್ರತರವಾದ ಕಾಯಿಲೆಯ ಪ್ರಕರಣಗಳಲ್ಲಿ** ನೌಕರರು ಅಥವಾ ಅವಳ ಗಂಡ / ಹೆಂಡತಿ ಅಥವಾ ಮಕ್ಕಳು ತೀವ್ರ ಅನಾರೋಗ್ಯದಿಂದ ಬಳಲುತ್ತಿದ್ದಲ್ಲಿ ನಿಯಮಾನುಸಾರ ಜಿಲ್ಲಾ ವೈದ್ಯಕೀಯ ಮಂಡಳಿಯಿಂದ ಪಡೆದ ಪ್ರಮಾಣ ಪತ್ರವನ್ನು ಹಾಜರುಪಡಿಸುವುದು. ಹೃದಯ ಸಂಬಂಧಿ, ಕಿಡ್ನಿ, ಕ್ಯಾನ್ಸರ್ ಮತ್ತು ಹೆಚ್.ಐ.ವಿ. ಕಾಯಿಲೆಗಳಿಂದ ನರಳುತ್ತಿರುವವರಿಗೆ ಮಾತ್ರ ಈ ಪ್ರಕರಣದಡಿ ಅರ್ಜಿ ಸಲ್ಲಿಸಲು ಅವಕಾಶವಿದೆ. ಸುಳ್ಳು ಪ್ರಮಾಣ ಪತ್ರಗಳನ್ನು ಸಲ್ಲಿಸಿದಲ್ಲಿ ಯಾವುದೇ ಸೂಚನೆ ನೀಡದೆ ಶಿಸ್ತಿನ ಕ್ರಮ ಜರುಗಿಸಲಾಗುವುದು. ಪತಿ–ಪತ್ನಿ ಇಬ್ಬರೂ ಸರ್ಕಾರಿ ನೌಕರರಾಗಿದ್ದಲ್ಲಿ, ಯಾರಾದರೂ ಒಬ್ಬರು ಮಾತ್ರ ಈ ಆದ್ಯತೆಯಡಿ ವರ್ಗಾವಣೆಗೆ ಅರ್ಜಿ

ಸಲ್ಲಿಸಲು ಅವಕಾಶವಿದೆ.

9. ಪ್ರಥಮ ಬಾರಿಗೆ ನೇಮಕಾತಿ ಹೊಂದಿದ ಅಥವಾ ಸೇವೆಯಲ್ಲಿರುವ ಸಿಬ್ಬಂದಿ **ವಿಧವೆಯಾಗಿದ್ದಲ್ಲಿ,** ಅಂಥವರನ್ನು ಹುದ್ದೆಯ ಲಭ್ಯತೆಯ ಮೇರೆಗೆ ಸದರಿ ಸಿಬ್ಬಂದಿಯ ಮೃತ ಪತಿ ಸೇವೆಸಲ್ಲಿಸುತ್ತಿದ್ದ ಸ್ಥಳ ಅಥವಾ ಆಕೆಯ ಆಯ್ಕೆಯ ಸ್ಥಳಕ್ಕೆ ವರ್ಗಾವಣೆಗೆ ಹುದ್ದೆಗಳ ಲಭ್ಯತೆಗೆ ಅನುಸಾರ ಆದ್ಯತೆ ಮೇರೆಗೆ ಅವಕಾಶ ಕಲ್ಪಿಸತಕ್ಕದ್ದು. ಸಾರ್ವಜನಿಕ ಹಿತಾಸಕ್ತಿ ವರ್ಗಾವಣೆಯಿಂದ ವಿನಾಯಿತಿಗೆ ಪರಿಗಣಿಸಬಹುದು.

10. **ಭಾರತೀಯ ರಕ್ಷಣಾ ಪಡೆ / ಅರೆ ಮಿಲಿಟರಿ ಪಡೆಗಳಲ್ಲಿ (ಕೇಂದ್ರ ಗೃಹ ಸಚಿವಾಲಯವು ಕರೆಯುವ ಯಾವುದೇ ಹೆಸರಿನ ಸೈನಿಕರು)** ಕಾರ್ಯನಿರ್ವಹಿಸುತ್ತಿರುವ / ಮೃತರಾಗಿರುವ ಅವಲಂಬಿತರಿಗೆ ಒಂದು ಸಲದ ಕ್ರಮವಾಗಿ / ನಿವೃತ್ತ ಆಗಿರುವ ಅವಲಂಬಿತರಿಗೆ ಒಂದು ಸಲದ ಕ್ರಮವಾಗಿ / ಶಾಶ್ವತ ಅಂಗವಿಕಲ ಸೈನಿಕರ ಪತಿ ಅಥವಾ ಪತ್ನಿ ಇವರು, ಸಕ್ಷಮ ಪ್ರಾಧಿಕಾರದಿಂದ ಪಡೆದ ಪ್ರಮಾಣ ಪತ್ರದ ಮೇರೆಗೆ ಹುದ್ದೆಗಳ ಲಭ್ಯತೆಗನುಸಾರ ಕೋರಿಕೆ ಮೇರೆಗಿನ ವರ್ಗಾವಣೆ ಪರಿಗಣಿಸಬಹುದು.

11. **ಗಂಡ ಅಥವಾ ಹೆಂಡತಿ** ಇಬ್ಬರಲ್ಲಿ ಒಬ್ಬರು ಸರ್ಕಾರಿ ನೌಕರರಾಗಿದ್ದಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಸ್ಥಳದಲ್ಲಿ ಕನಿಷ್ಠ **ಮೂರು (3) ವರ್ಷಗಳ** ಸೇವೆಯನ್ನು ಸಲ್ಲಿಸಿದಲ್ಲಿ ಮಾತ್ರ ವರ್ಗಾವಣೆ ಸಮಯದಲ್ಲಿ ಆತನ / ಆಕೆಯ ಹೆಂಡತಿ / ಗಂಡ ವಾಸಿಸುತ್ತಿರುವ ಸ್ಥಳಕ್ಕೆ ಅಥವಾ ಹತ್ತಿರದ ಸ್ಥಳಕ್ಕೆ ಸ್ಪಷ್ಟ ಖಾಲಿ ಸ್ಥಳದ ಲಭ್ಯತೆಯ ಆಧಾರದ ಮೇರೆಗೆ ಪತಿ/ಪತ್ನಿಯ ರಹವಾಸಿ ಪ್ರಮಾಣ ಪತ್ರ ಸಲ್ಲಿಸಿ ಸೇವಾ ಅವಧಿಯಲ್ಲಿ ಎರಡು ಬಾರಿಗಿಂತ ಹೆಚ್ಚಿಲ್ಲದೆ ವರ್ಗಾವಣೆ ಮಾಡಲು ಅವಕಾಶವಿದೆ.

12. ಒಬ್ಬ ಶಿಕ್ಷಕ/ಶಿಕ್ಷಕೇತರ ಸಿಬ್ಬಂದಿ, ವಿಶ್ವವಿದ್ಯಾಲಯದಿಂದ ಮನ್ನಣೆ ಪಡೆದ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾಲಯದ **ಶಿಕ್ಷಕರ ಸಂಘ / ಶಿಕ್ಷಕೇತರ ಸಂಘ**ದ ಚುನಾಯಿತ ಪದಾಧಿಕಾರಿಯಾಗಿದ್ದಲ್ಲಿ / ಪ್ರತಿನಿಧಿಯಾಗಿದ್ದಲ್ಲಿ / ಆಯ್ಕೆ ಪ್ರತಿನಿಧಿಯಾಗಿದ್ದಲ್ಲಿ, ತೋ.ವಿ.ವಿ.ಯ ಮುಖ್ಯ ಆವರಣದಿಂದ 3 ಜನರನ್ನು ಮತ್ತು ಮಹಾವಿದ್ಯಾಲಯ / ತೋಟಗಾರಿಕೆ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಒಂದು ಆವರಣದಿಂದ ಒಬ್ಬರನ್ನು ಮೀರದಂತೆ ಅಂಥ ಸರ್ಕಾರಿ ನೌಕರನನ್ನು ಅವನು ಯಾವ ಅವಧಿಗೆ ಆಯ್ಕೆಯಾಗಿರುವನೋ ಆ ಅವಧಿ ಮುಗಿಯುವವರೆಗೆ ಅವನನ್ನು ವರ್ಗಾಯಿಸತಕ್ಕದ್ದಲ್ಲ. ಸದರಿ ಅವಧಿ ಪೂರ್ಣಗೊಂಡ ಮೂರು ತಿಂಗಳುಗಳೊಳಗೆ ಚುನಾವಣೆಗಳು ನಡೆಯದಿರುವ ಸಂದರ್ಭದಲ್ಲಿ ಅವನನ್ನು ವರ್ಗಾಯಿಸಬಹುದು. ಅವನು ಮರು ಆಯ್ಕೆಯಾದ ಸಂದರ್ಭದಲ್ಲಿ ಎರಡನೇ ಅವಧಿ ಪೂರ್ಣಗೊಳ್ಳುವವರೆಗೆ ಅವನನ್ನು ಆ ಸ್ಥಾನದಲ್ಲಿ ಮುಂದುವರಿಸಬಹುದು. ಅವನು ಮೂರು ಅಥವಾ ತರುವಾಯದ ಅವಧಿಗಳಿಗೆ ಆಯ್ಕೆಯಾದರೂ ಸಹ ಅವನ ವರ್ಗಾವಣೆಗೆ ಯಾವುದೇ ಅಡೆತಡೆ ಇರತಕ್ಕದ್ದಲ್ಲ. ಸಕ್ಷಮ ಪ್ರಾಧಿಕಾರಿಯು ಅವನನ್ನು ವರ್ಗಾಯಿಸುವುದಕ್ಕೆ ಮುಂಚೆ ಅವನು ಎರಡನೇ ಅವಧಿಯನ್ನು ಪೂರ್ಣಗೊಳಿಸಿದ ವಿಷಯವನ್ನು ಖಚಿತಪಡಿಸಿಕೊಳ್ಳತಕ್ಕದ್ದು. ಈ ಉದ್ದೇಶಕ್ಕಾಗಿ, ಸಂಘವು, ಸಾಧ್ಯವಾದಷ್ಟು ಬೇಗನೆ ಸಂಘಕ್ಕೆ ಆಯ್ಕೆಯಾದ ಚುನಾಯಿತ / ಪದಾಧಿಕಾರಿಗಳ ಪಟ್ಟಿಯನ್ನು ಸಕ್ಷಮ ಪ್ರಾಧಿಕಾರಿಗೆ ಸಲ್ಲಿಸತಕ್ಕದ್ದು.

13. ನಿಯುಕ್ತಿ ಮಾಡಿದ ಸ್ಥಳದಲ್ಲಿ **ಮೂರು (3) ವರ್ಷ** ಕನಿಷ್ಠ ಸೇವಾವಧಿ ಪೂರ್ಣಗೊಳಿಸಿದ ನಂತರ ಹುದ್ದೆಗಳ ಲಭ್ಯತೆಯನ್ನು ಆಧರಿಸಿ ಪತಿ ಮತ್ತು ಪತ್ನಿ ಇಬ್ಬರಿಗೂ ಒಂದೇ ಸ್ಥಳಕ್ಕೆ / ಹತ್ತಿರದ ಸ್ಥಳಕ್ಕೆ ಸೇವಾವಧಿಯಲ್ಲಿ ಎರಡು ಬಾರಿಗಿಂತ ಹೆಚ್ಚಿಲ್ಲದೆ ವರ್ಗಾವಣೆಗೆ ಪರಿಗಣಿಸತಕ್ಕದ್ದು.

14. **ಹೈದ್ರಾಬಾದ್-ಕರ್ನಾಟಕ** ಪ್ರದೇಶದಲ್ಲಿ ನೆಲೆಸಿರುವ ಕಚೇರಿಗಳಿಗೆ ಸ್ಥಳೀಯ ವೃಂದ ಮತ್ತು ಮಿಕ್ಕುಳಿದ ವೃಂದಗಳಲ್ಲಿನ ವಿವಿಧ ವೃಂದದ ಹುದ್ದೆಗಳಲ್ಲಿ ಖಾಲಿ ಇರುವ ಹುದ್ದೆಗಳಿಗೆದುರಾಗಿ ನೇಮಕಾತಿ ಹೊಂದಿರುವ ನೌಕರರನ್ನು ಅವರ ನೇಮಕಾತಿ ದಿನಾಂಕದಿಂದ ಕನಿಷ್ಠ 10 ವರ್ಷಗಳವರೆವಿಗೂ ಹೈದ್ರಾಬಾದ್-ಕರ್ನಾಟಕ ಪ್ರದೇಶ ಹೊರತುಪಡಿಸಿ ವರ್ಗಾವಣೆ ಮಾಡಬಾರದು.

    ಅನುಚ್ಛೇದ 371 (ಜೆ) ಅನುಷ್ಠಾನಕ್ಕೆ ಸಂಬಂಧಿಸಿದಂತೆ ಹೊರಡಿಸಲಾದ ಕರ್ನಾಟಕ ಸಾರ್ವಜನಿಕ ಉದ್ಯೋಗ (ಹೈದ್ರಾಬಾದ್-ಕರ್ನಾಟಕ ಪ್ರದೇಶದಲ್ಲಿ ನೇಮಕಾತಿಯಲ್ಲಿ ಮೀಸಲಾತಿ)ಆದೇಶ,2013 ರಂತೆ ಮಾತೃ ವೃಂದವನ್ನು ವಿಭಜಿಸಿ ರಚಿಸಲಾದ ಸ್ಥಳೀಯ ವೃಂದ ಹಾಗೂ ಮಿಕ್ಕಳಿದ ವೃಂದಗಳು ನೇರ ನೇಮಕಾತಿ, ಮುಂಬಡ್ತಿ, ಜೇಷ್ಠತೆ ಹಾಗೂ ರೋಸ್ಟರ್ ಬಿಂದುಗಳಿಗೆ ಸಂಬಂಧಿಸಿದಂತೆ ಪ್ರತ್ಯೇಕ ಘಟಕಗಳೆಂದು ಪರಿಗಣಿಸಬೇಕಾಗಿದ್ದು, ಸ್ಥಳೀಯ ವ್ಯಕ್ತಿಗಳನ್ನು ಅವರವರ ಆಯ್ಕೆಗನುಸಾರ ಸ್ಥಳೀಯ ವೃಂದ ಹಾಗೂ ಮಿಕ್ಕುಳಿದ ವೃಂದಗಳಿಗೆ ಹಂಚಿಕೆ ಮಾಡಿರುವುದರಿಂದ, ಸ್ಥಳೀಯ ವ್ಯಕ್ತಿಗಳಿಗೆ ಸಂಬಂಧಿಸಿದಂತೆ ಅವರ ವರ್ಗಾವಣೆಯನ್ನು ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ಮಾತ್ರ ಪರಿಗಣಿಸಬೇಕಾಗುತ್ತದೆ. ಮುಂದುವರೆದು, ಮಿಕ್ಕುಳಿದ ವೃಂದಕ್ಕೆ ಸೇರಲು ಆಯ್ಕೆ ನೀಡಿದ ಸ್ಥಳೀಯ ವ್ಯಕ್ತಿಗಳ ವರ್ಗಾವಣೆಗೆ ಸಂಬಂಧಿಸಿದಂತೆ ಮಿಕ್ಕುಳಿದ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆ ಮಾತ್ರ ಪರಿಗಣಿಸತಕ್ಕದ್ದು.

ಸ್ಥಳೀಯ ವ್ಯಕ್ತಿಗಳು, ಸ್ಥಳೀಯ ವೃಂದ ಆಯ್ಕೆ ಮಾಡಿದ್ದ ಸನ್ನಿವೇಶದಲ್ಲಿ ಅವರ ಆಯ್ಕೆ ರಾಜ್ಯ ಮಟ್ಟದ ಸ್ಥಳೀಯ ವೃಂದವಾದಲ್ಲಿ ರಾಜ್ಯಮಟ್ಟದ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ, ಅಂತೆಯೇ, ಅವರ ಆಯ್ಕೆ ಪ್ರಾದೇಶಿಕ, ಜಿಲ್ಲಾ ಅಥವಾ ತಾಲ್ಲೂಕು ಮಟ್ಟದ ಸ್ಥಳೀಯ ವೃಂದಕ್ಕೆ ಆಗಿದ್ದಲ್ಲಿ, ಅವರ ವರ್ಗಾವಣೆ ಪ್ರಾದೇಶಿಕ, ಜಿಲ್ಲಾ ಅಥವಾ ತಾಲ್ಲೂಕ ಮಟ್ಟದ ಸ್ಥಳೀಯ ವೃಂದಕ್ಕೆ ಸೇರಿದ ಹುದ್ದೆಗಳನ್ನು ಒಗ್ಗೂಡಿಸಿ, ರಾಜ್ಯವ್ಯಾಪಿ ಸ್ಥಳೀಯ ವೃಂದ ರಚಿಸಿ ಅಧಿಸೂಚಿಸಿದ್ದಲ್ಲಿ, ಯಾವುದೇ ಸ್ಥಳೀಯ ವೃಂದದಲ್ಲಿ ಕಾರ್ಯ ನಿರ್ವಹಿಸುತ್ತಿರುವ ಸ್ಥಳೀಯ ವ್ಯಕ್ತಿಗಳನ್ನು ವರ್ಗಾವಣೆ ವಿಷಯಕ್ಕೆ ಸಂಬಂಧಿಸಿದಂತೆ ರಾಜ್ಯ ವ್ಯಾಪಿ ಸ್ಥಳೀಯ ವೃಂದದಲ್ಲಿ ಲಭ್ಯವಿರುವ ಹುದ್ದೆಗಳಿಗೆದುರಾಗಿ ವೃಂದ ನಿರ್ವಹಣಾ ಹಿತದೃಷ್ಟಿಯಿಂದ ಪರಿಗಣಿಸಬಹುದು.

15. ವರ್ಗಾವಣೆ ಮಾಡಬೇಕಾದ ಸ್ಥಳದಲ್ಲಿಯ ಹುದ್ದೆಗಳ ಲಭ್ಯತೆಯನ್ನಾಧರಿಸಿ ಪರಿಗಣಿಸುವುದು ಮತ್ತು ಈ ರೀತಿ ವರ್ಗಾವಣೆಗೊಂಡ ನೌಕರರನ್ನು ಆ ಸ್ಥಳಕ್ಕೆ ಬದಲಿ ವ್ಯವಸ್ಥೆ ಮಾಡಿದ ನಂತರ ಮಾತ್ರ ಕರ್ತವ್ಯದಿಂದ ಬಿಡುಗಡೆ ಮಾಡುವುದು.
16. ಪ್ರತಿಯೊಬ್ಬ ವಿಜ್ಞಾನಿ/ಶಿಕ್ಷಕ ಪ್ರತ್ಯೇಕವಾಗಿ ಬೋಧನೆ / ಸಂಶೋಧನೆ / ವಿಸ್ತರಣೆಗಳನ್ನೊಳಗೊಂಡಂತೆ ಪ್ರತಿಯೊಂದು ವಿಭಾಗಗಳಲ್ಲಿ ಕನಿಷ್ಠ **ಮೂರು (3) ವರ್ಷಗಳ** ಸೇವೆಯನ್ನು ಪೂರ್ಣಗೊಳಿಸಿದ ನಂತರ ವರ್ಗಾವಣೆಗೆ ಪರಿಗಣಿಸುವುದು. ಈ ರೀತಿ ವರ್ಗಾವಣೆಗೊಂಡ ನೌಕರರನ್ನು ಆ ಸ್ಥಳಕ್ಕೆ ಬದಲಿ ವ್ಯವಸ್ಥೆ ನಂತರ ಮಾತ್ರ ಕರ್ತವ್ಯದಿಂದ ಬಿಡುಗಡೆ ಮಾಡುವುದು.
17. **ವಯೋನಿವೃತ್ತಿ** ಹೊಂದಲು **ಎರಡು (2) ವರ್ಷಕ್ಕೆ** ಮೊದಲು ನೌಕರನು ತಾನು ಬಯಸಿದ ಸ್ಥಳಕ್ಕೆ ವರ್ಗಾವಣೆಗೆ ಮನವಿ ಮಾಡಿದಲ್ಲಿ, ಕೋರಿದ ಸ್ಥಳದಲ್ಲಿ ಹುದ್ದೆ ಖಾಲಿ ಸ್ಥಾನಗಳ ಲಭ್ಯತೆಯನ್ನಾಧರಿಸಿ ವರ್ಗಾವಣೆಯನ್ನು ಪರಿಗಣಿಸಬಹುದು.
18. ವಿಶ್ವವಿದ್ಯಾಲಯದಲ್ಲಿ ರೂ.100.00 ಲಕ್ಷ ಮತ್ತು ಅದಕ್ಕಿಂತ ಹೆಚ್ಚಿನ ಮೊತ್ತದ ಬಾಹ್ಯ ಅನುದಾನಿತ ಬೃಹತ್ ಯೋಜನೆಗಳಲ್ಲಿ (NHM, NHB, RKVY ಮುಂತಾದವುಗಳನ್ನು ಹೊರತುಪಡಿಸಿ ಸ್ಪರ್ಧಾತ್ಮಕ ಅನುದಾನದಲ್ಲಿ ಪಡೆದ ಯೋಜನೆಗಳು) ಪ್ರಧಾನ ಪರಿವೀಕ್ಷಕರು ಮತ್ತು ಸಹ ವೀಕ್ಷಕರೆಂದು ನಿಯುಕ್ತಿಗೊಂಡಿರುವ ಶಿಕ್ಷಕರ ವರ್ಗಾವಣೆಗೆ ಸಂಬಂಧಿಸಿದಂತೆ, ಚಾಲ್ತಿಯಲ್ಲಿರುವ ಯೋಜನೆಗಳ ಪರಿಣಾಮಕಾರಿ ಕಾರ್ಯಗತಗೊಳಿಸುವಿಕೆಗೆ ಅಡ್ಡಿಯಾಗದಂತೆ ಪ್ರಧಾನ ಪರಿವೀಕ್ಷಕ / ಸಹ ಪರಿವೀಕ್ಷಕರಾಗಿರುವ ಶಿಕ್ಷಕರು 3 ವರ್ಷಗಳ ಅವಧಿಗೆ ಮೇಲ್ಪಟ್ಟು ಯೋಜನೆ ಮುಕ್ತಾಯವಾಗುವವರೆಗೂ ಇಚ್ಛೆಯ ಮೇರೆಗೆ ಅದೇ ಸ್ಥಳದಲ್ಲಿ ಮುಂದುವರಿಯಬಹುದಾಗಿದೆ.
19. ಮೇಲೆ ಹೇಳಿದ ಮಾರ್ಗಸೂಚಿಗಳು ಚಾಲ್ತಿಯಲ್ಲಿದ್ದಾಗ್ಯೂ ಸಹ **'ಡಿ' ಗ್ರೂಪ್** ಸಿಬ್ಬಂದಿಯ ಸಾಮಾನ್ಯ ವರ್ಗಾವಣೆಯನ್ನು ಅವರು ಕರ್ತವ್ಯ ನಿರ್ವಹಿಸುತ್ತಿರುವ ವಲಯ ಪರಿಧಿಯಲ್ಲಿ ಮೂರು (3) ವರ್ಷಗಳ ಸೇವೆಯನ್ನು ಪೂರೈಸಿದ ನಂತರ ಪರಿಗಣಿಸಬಹುದಾಗಿದೆ.
20. ವರ್ಗಾವಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ವಿಶ್ವವಿದ್ಯಾಲಯದ ಎಲ್ಲಾ **ಶಿಕ್ಷಕೇತರ ನೌಕರರು** ಎಲ್ಲಾ ವಿಭಾಗಗಳಲ್ಲಿ ಅನುಭವ ಹೊಂದುವಂತೆ ಪರಿಗಣಿಸುವುದು. ಎಲ್ಲಾ ವಿಭಾಗಗಳಲ್ಲಿ ಕಾರ್ಯನಿರ್ವಹಿಸಿ ಎಲ್ಲಾ ವಿಭಾಗಗಳ ಅನುಭವವನ್ನು ಪಡೆಯಲು ಅನುಕೂಲವಾಗುವಂತೆ ಶಿಕ್ಷಕೇತರ ಸಿಬ್ಬಂದಿಯ ವರ್ಗಾವಣೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ವಿಶ್ವವಿದ್ಯಾಲಯದ ಇನ್ನಿತರ ಸ್ಥಳಗಳಲ್ಲಿ ಬೇರೆ ಬೇರೆ ವಿಭಾಗಗಳ ಸಮಾನ ಸ್ಥಾನದ ಹುದ್ದೆಗೆ ವರ್ಗಾವಣೆ ಮಾಡುವಂತೆ ಪರಿಗಣಿಸುವುದು. ಆದಾಗ್ಯೂ, ಈ ನಿಯಮಗಳು ಶಿಕ್ಷಕ ಸಿಬ್ಬಂದಿಗೆ ಅನ್ವಯವಾಗುವುದಿಲ್ಲ. ಶಿಕ್ಷಕ ಸಿಬ್ಬಂದಿಯನ್ನು ಆಂತರಿಕವಾಗಿ ಬೋಧನೆ, ಸಂಶೋಧನೆ ಮತ್ತು ವಿಸ್ತರಣಾ ನಿರ್ದೇಶನಾಲಯಗಳಿಗೆ ನಿರ್ದಿಷ್ಟವಾದ ವೃಂದ ಮತ್ತು ಸ್ಥಳದಲ್ಲಿ ಕನಿಷ್ಠ ಮೂರು (3) ವರ್ಷಗಳ ಸೇವೆಯನ್ನು ಪೂರ್ಣಗೊಳಿಸಿದ ತರುವಾಯ ಅಗತ್ಯತೆಗನುಗುಣವಾಗಿ ಅವರವರ ಶೈಕ್ಷಣಿಕ ಕಾರ್ಯನಿರ್ವಹಣೆಯ ಕ್ಷೇತ್ರದ ತಜ್ಞತೆ, ಪ್ರತಿಭೆಯನ್ನು ತೆರೆದಿಡಲು/ಪ್ರದರ್ಶಿಸಲು ಅವಕಾಶ ದೊರಕುವಂತೆ ಪಕ್ಷಪಾತವಿಲ್ಲದೆ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ವರ್ಗಾವಣೆಗೆ ಪರಿಗಣಿಸಬಹುದು.
21. ವಿಶ್ವವಿದ್ಯಾಲಯದ ನೌಕರನು ವರ್ಗಾವಣೆ ಬಯಸಿದಲ್ಲಿ ಸರ್ಕಾರದ ಆದೇಶದಲ್ಲಿನ ಜನಸಂಖ್ಯೆಯ ಆಧಾರದ ಮೇಲೆ ವರ್ಗೀಕರಣಗೊಳಿಸಲಾದಂತೆ **ಮೂರು (3) ವರ್ಷ** ಪೂರ್ಣಗೊಂಡ ಸಿಬ್ಬಂದಿಗಳು "ಎ" ಸಮೂಹದ ಕೇಂದ್ರದಿಂದ "ಬಿ" ಅಥವಾ "ಸಿ" ಸಮೂಹದ ಕೇಂದ್ರಗಳಿಗೆ, "ಬಿ" ಸಮೂಹದ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು "ಎ" ಅಥವಾ "ಸಿ" ಸಮೂಹದ ಕೇಂದ್ರಗಳಿಗೆ, "ಸಿ" ಸಮೂಹದ ಕೇಂದ್ರದಲ್ಲಿ ಕಾರ್ಯನಿರ್ವಹಿಸುವ ಸಿಬ್ಬಂದಿಗಳು "ಎ" ಅಥವಾ "ಬಿ" ಸಮೂಹದ ಕೇಂದ್ರಗಳಿಗೆ, ಹುದ್ದೆಗಳ ಲಭ್ಯತೆಯ ಆಧಾರದ ಮೇರೆಗೆ ವರ್ಗಾವಣೆಗೆ ಪರಗಣಿಸಬಹುದು.

22. ಮೇಲ್ಕಂಡ ನಿಯಮಗಳು **ಶಿಕ್ಷೆ/ದಂಡನೆ** ಮೇರೆಗೆ ಮಾಡಲಾಗುವ ವರ್ಗಾವಣೆಗಳಿಗೆ ಅನ್ವಯವಾಗುವುದಿಲ್ಲ. ಆದಾಗ್ಯೂ ಪ್ರಕರಣವಾರು ನಿರ್ಧಾರಗಳನ್ನು ತೆಗೆದುಕೊಳ್ಳುವ ಹಕ್ಕು ಕುಲಪತಿಯವರ ವಿವೇಚನೆಗೆ ಸೇರಿದ್ದಾಗಿರುತ್ತದೆ.
23. ಒಬ್ಬ ವ್ಯಕ್ತಿ ಒಂದೇ ಬೆಳೆಯ ಮೇಲೆ ಸಂಶೋಧನೆಯ ವಿಷಯವಾಗಿ ನಿರಂತರವಾಗಿ **ಮೂರು (3) ವರ್ಷಗಳಿಗಿಂತ** ಹೆಚ್ಚಿನ ಅವಧಿಗೆ ಕೆಲಸ ನಿರ್ವಹಿಸಿ ಆ ಕ್ಷೇತ್ರದಲ್ಲಿ ಮಹತ್ವದ /ಪ್ರಾಮುಖ್ಯವಾದ ಕೊಡುಗೆಯನ್ನು ತಾಂತ್ರಿಕ ಪ್ರಗತಿಯ ಮೂಲಕ ವಿವಿಧ ಕೌಶಲ್ಯಗಳ ನಿದರ್ಶನಗಳೊಂದಿಗೆ ನಿಯತಕಾಲಿಕೆಗಳಲ್ಲಿ ಪ್ರಕಟಿಸಿದ ಪ್ರಸಂಗಗಳಲ್ಲಿ ಅಂಥ ವ್ಯಕ್ತಿಯನ್ನು ಅದೇ ಸ್ಥಳದಲ್ಲಿ ಮುಂದುವರೆಸಬಹುದು. ಒಂದು ವೇಳೆ ಅವನು/ಅವಳು ಅದೇ ಸ್ಥಳದಲ್ಲಿ ಅದೇ ಬೆಳೆಯ ಬಗ್ಗೆ ಕೆಲಸ ಮುಂದುವರೆಸಲು ಆದ್ಯತೆ ನೀಡಿದಲ್ಲಿ ಅಂಥ ಒಟ್ಟು ಸೇವಾವಧಿಯನ್ನು ಹತ್ತು ವರ್ಷಗಳಿಗೆ ಮೀರದಂತೆ ಮಿತಿಗೊಳಿಸಿ ನಿರ್ಬಂಧಿಸಬಹುದು.
24. ವರ್ಗಾವಣೆ ಪ್ರಕ್ರಿಯೆಯನ್ನು ನಿರ್ದಿಷ್ಟವಾಗಿ ಪ್ರತಿ ವರ್ಷದ **ಏಪ್ರೀಲ್ ಮತ್ತು ಮೇ** ತಿಂಗಳುಗಳಲ್ಲಿ / ಸರ್ಕಾರದಿಂದ ಕಾಲಕಾಲಕ್ಕೆ ಹೊರಡಿಸುವ ಸುತ್ತೋಲೆಯ ಅವಧಿಗೆ ಅನುಗುಣವಾಗಿ ಕಾರ್ಯಗತಗೊಳಿಸತಕ್ಕದ್ದು. ಹಾಗೂ ಮೇಲೆ ತಿಳಿಸಿದ ಷರತ್ತುಗಳನ್ನು ಪೂರೈಸಿದ ನೌಕರರು ಮಾತ್ರ **ಪ್ರತಿ ವರ್ಷ ಫೆಬ್ರುವರಿ 1 ರಿಂದ ಮಾರ್ಚ 31 ರ ರೊಳಗಾಗಿ** ವರ್ಗಾವಣೆಗೆ ಅರ್ಜಿಯನ್ನು ಸಲ್ಲಿಸತಕ್ಕದ್ದು. ಈ ಅವಧಿಯನ್ನು ಹೊರತುಪಡಿಸಿ ವರ್ಗಾವಣೆಗಾಗಿ ಬರತಕ್ಕ ಅರ್ಜಿಗಳನ್ನು ಗಣನೆಗೆ ತೆಗೆದುಕೊಳ್ಳಲಾಗುವುದಿಲ್ಲ.
25. ನಿರ್ದಿಷ್ಟ ಸ್ಥಳದಲ್ಲಿ ಸಲ್ಲಿಸಿದ ಸೇವೆ, ಖಾಲಿ ಹುದ್ದೆಗಳನ್ನಾಧರಿಸಿ, ಪರಾಮರ್ಶೆಯ ಮೂಲಕ **ವಿಶ್ವವಿದ್ಯಾಲಯದ ವರ್ಗಾವಣೆ ಸಮಿತಿಯು** ವರ್ಗಾವಣೆಗೆ ಪರಿಗಣಿಸತಕ್ಕದ್ದು.
26. ವಿಶ್ವವಿದ್ಯಾಲಯದ ವರ್ಗಾವಣೆ ಸಮಿತಿಯು ವರ್ಗಾವಣೆ ನಿಯಮಾವಳಿಗಳ ಪ್ರಕಾರ ಪರಿಶೀಲಿಸಿ ಶಿಫಾರಸ್ಸು ಮಾಡಿದ ತರುವಾಯ ಮಾನ್ಯ ಕುಲಪತಿಗಳ ಅನುಮೋದನೆಯೊಂದಿಗೆ ವರ್ಗಾವಣೆಯನ್ನು ಪರಿಗಣಿಸುವುದು.
27. ವರ್ಗಾವಣೆ ಪ್ರಮಾಣ **ಶೇಕಡಾ 5%** ಮತ್ತು **ಕಾಲಕಾಲಕ್ಕೆ ಸರ್ಕಾರದಿಂದ** ನೀಡುವ ಪ್ರಮಾಣಕ್ಕನುಗುಣವಾಗಿ ಮಾಡಲಾಗುವುದು.
28. ಯಾವುದೇ ಕ್ಷಣದಲ್ಲಿ ಕಾರಣ ನೀಡದೆ ವಿಶ್ವವಿದ್ಯಾಲಯದ ಹಿತದೃಷ್ಟಿಯಿಂದ ಯಾವುದೇ ನೌಕರನ ವರ್ಗಾವಣೆ ಮಾಡುವ / ವರ್ಗಾವಣೆ ರದ್ದುಪಡಿಸುವ ಕಾಯ್ದಿರಿಸುವ ಹಕ್ಕು ಕುಲಪತಿಯವರ ವಿವೇಚನೆಗೆ ಸೇರಿದ್ದಾಗಿರುತ್ತದೆ.
29. ವರ್ಗಾವಣೆಯು ಸಿಬ್ಬಂದಿಗಳ ಹಕ್ಕು ಆಗಿರುವುದಿಲ್ಲ.
30. ಆದಾಗ್ಯೂ ವಿಶ್ವವಿದ್ಯಾಲಯವು ತನ್ನ ಇಚ್ಛೆಯಂತೆ ಯಾವುದೇ ಶಿಕ್ಷಕ / ವಿಜ್ಞಾನಿಯನ್ನು ಖಾಲಿ ಇರುವ ಭಾರತ ಸರ್ಕಾರದಲ್ಲಿ ಹೊಸದಾಗಿ ಪ್ರಾರಂಭಿಸಿರುವ ಯೋಜನೆ / ಖಾಸಗಿ ಯೋಜನೆಗೆ ವರ್ಗಾವಣೆ ಮಾಡಬಹುದು.

ಆಡಳಿತಾಧಿಕಾರಿಗಳು.

ಇವರಿಗೆ–

1. ಎಲ್ಲಾ ಅಧಿಕಾರಿಗಳು, ಮುಖ್ಯ ಆವರಣ / ತೋಟಗಾರಿಕೆ ಮಹಾವಿದ್ಯಾಲಯ, ತೋ.ವಿ.ವಿ. ಬಾಗಲಕೋಟ.
2. ಎಲ್ಲಾ ಸಹ ಸಂಶೋಧನಾ ಮತ್ತು ವಿಸ್ತರಣಾ ನಿರ್ದೇಶಕರು, ಮು.ತೋ.ಸಂ.&ವಿ.ಕೇ / ಪ್ರಾ.ತೋ.ಸಂ.&ವಿ.ಕೇ. / ಎಲ್ಲಾ ಮುಖ್ಯಸ್ಥರು, ತೋ.ಸಂ.ಕೇ / ತೋ.ವಿ.& ಶಿ. ಘಟಕ ತೋ.ವಿ.ವಿ. ಬಾಗಲಕೋಟ.
3. ಎಲ್ಲಾ ಯೋಜನಾ ಮುಖ್ಯಸ್ಥರು, ತೋ.ವಿ.ವಿ. ಬಾಗಲಕೋಟ.
4. ಆಪ್ತ ಕಾರ್ಯದರ್ಶಿಗಳು, ಮಾನ್ಯ ಕುಲಪತಿಗಳ ಕಾರ್ಯಾಲಯ, ತೋ.ವಿ.ವಿ. ಬಾಗಲಕೋಟ.
5. ಕ.ಕ.